


ಲಾಲ್‌ಬಾಗ್ ಉದ್ಯಾನವನ್ನು ಬ್ರಿಟಿಷರು ಉಡುಗೊರೆಯಾಗಿ ಪಡೆದು, ನಂತರ ಅದನ್ನು ಹಿಂದಿರುಗಿಸಿದ ವಿಶಿಷ್ಟ ಪ್ರಸಂಗಕ್ಕೆ ಈಗ 200 ವರ್ಷ!

■ ಎನ್. ಜಗನ್ನಾಥ್ ಪ್ರಕಾಶ್

# ಕೆಂಪುತೋಟ ಹೊರೆಯಾದ ಉಡುಗೊರೆ!



ಕಣ್ಣು ಕೋರೈಸುವ ವಿವಿಧ ಬಣ್ಣಗಳ ಹೂಗಳಿಂದ ಎಲ್ಲಾ ಋತುಗಳಲ್ಲೂ ಕಂಗೊಳಿಸುವ ಲಾಲ್‌ಬಾಗ್ ಬೆಂಗಳೂರಿನ ಜೀವನಾಡಿಗಳಲ್ಲೊಂದು. ಅಪೂರ್ವ ಸಸ್ಯವೈವಿಧ್ಯವನ್ನು ಹೊಂದಿರುವ ಈ ಕೆಂಪುತೋಟ ವಿಶ್ವಪ್ರಸಿದ್ಧವಾದ ಸೊಬಗಿನ ಉದ್ಯಾನ. ಈ ಉದ್ಯಾನದ ನೂರಾರು ವರ್ಷಗಳ ಇತಿಹಾಸದಲ್ಲಿ ಹಲವು ಸ್ವಾರಸ್ಯಕರ ಸಂಗತಿಗಳಿವೆ. ಅಂಥದೊಂದು ಘಟನೆ – ಲಾಲ್‌ಬಾಗ್‌ನ ಉಡುಗೊರೆ ಹಾಗೂ ನಿರಾಕರಣೆಯ ಪ್ರಸಂಗ.

ಕೆಂಪೇಗೌಡರಿಂದ ನಿರ್ಮಾಣಗೊಂಡ ಬೆಂಗಳೂರು ತನ್ನ ಐದು ಶತಮಾನಗಳ ಕಾಲಾವಧಿಯಲ್ಲಿ ಅನೇಕ ಆಳ್ವಿಕೆಗಳಿಗೆ ಒಳಪಟ್ಟಿದೆ. ಮಾರಾಟವೂ ಆಗಿರುವ ಬೆಂಗಳೂರು ಜಹಗೀರಾಗಿಯೂ ಇತ್ತು. ಮೈಸೂರು ಅರಸರ ಆಡಳಿತದಲ್ಲಿದ್ದ ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನ್ನು ಬ್ರಿಟಿಷ್ ಅಧಿಕಾರಿಯೊಬ್ಬ ತನ್ನ ಮೇಲಾಧಿಕಾರಿಗೆ ಉಡುಗೊರೆಯಾಗಿ ನೀಡಿದ್ದ ಕೂಡ. ಈ ಉಡುಗೊರೆ ಲಾಭದಾಯಕವಲ್ಲವೆಂದು ನಿರಾಕರಣೆಗೆ ಒಳಗಾಗಿತ್ತು. ಆ ಉಡುಗೊರೆ ಹಾಗೂ ನಿರಾಕಣೆಯ ಪ್ರಸಂಗ ನಡೆದುದು ಸರಿಯಾಗಿ ಇನ್ನೂರು ವರ್ಷಗಳ ಹಿಂದೆ (1819).